ನ್ಯಾಯಾಲಯದಲ್ಲಿ ವಿಚಾರಣಾ ಹಂತದಲ್ಲಿರುವುದರಿಂದ ಸದರಿ ಸನ್ನದನ್ನು 2011–12ನೇ ಸಾಲಿಗೆ ನವೀಕರಿಸಿರುವುದಿಲ್ಲ.
ಪರವಾನಗಿ ಪಡೆಯದೇ ಇರುವಂತಹ ಅಂಗಡಿಗಳು ಯಾವುದೂ ಇರುವುದಿಲ್ಲ.

ಪಿ.ಎಂ.ಜಿ.ಎಸ್.ವೈ ಯೋಜನೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 116 (439)
ಸದಸ್ಯರ ಹೆಸರು : ಶ್ರೀ ಸಂಪಂಗಿ ಎನ್ (ಬಾಗೇಪಲ್ಲಿ)
ಉತ್ತರಿಸುವ ಸಚಿವರು : ಶ್ರೀ ಜಗದೀಶ್ ಶೆಟ್ಟರ್
(ಗ್ರಾಮೀಣಾಭಿವೃದ್ಧಿ ಸಚಿವರು)

ಪ್ರಶ್ನೆಗಳು:

ಅ) ಬಾಗೇಪಲ್ಲಿ ವಿಧಾನಸಭಾ ಕ್ಷೇತ್ರದಲ್ಲಿ ಪಿ.ಎಂ.ಜಿ.ಎಸ್.ವೈ. ಯೋಜನೆಯಡಿ ಕಳೆದ ಮೂರು ವರ್ಷಗಳಿಂದ ರಸ್ತೆಗಳಿಗಾಗಿ ನೀಡಿರುವ ಹಣ ಎಷ್ಟು? ಯಾವ ಯಾವ ರಸ್ತೆಗಳ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗಿದೆ. ಇದಕ್ಕೆ ತಗುಲಿರುವ ಅನುದಾನ ಎಷ್ಟು? (ಸಂಪೂರ್ಣ ವಿವರ ಒದಗಿಸುವುದು)

ಉತ್ತರಗಳು:

ಅ) ಬಾಗೇಪಲ್ಲಿ ವಿಧಾನಸಭಾ ಕ್ಷೇತ್ರದಲ್ಲಿ ಕಳೆದ ಮೂರು ವರ್ಷಗಳಲ್ಲಿ ಪಿ.ಎಂ.ಜಿ.ಎಸ್.ವೈ.ಯಡಿ ಕೈಗೊಂಡಿರುವ ಕಾಮಗಾರಿಗಳು, ನೀಡಿರುವ ಅನುದಾನ ಹಾಗೂ ವರ್ಷವಾರು ವೆಚ್ಚದ ವಿವರವು ಕೆಳಗಿನಂತಿದೆ.

ಕ್ರ ಸಂ.	ಪ್ಯಾಕೇಜು ಸಂಖ್ಯೆ	ಕೈಗೆತಿತಕೊಳ್ಳಲಾದ ಕಾಮಗಾರಿ ಹೆಸರು	ನೀಡಿರುವ ಒಟ್ಟು ಅನುದಾನ	ವರ್ಷವಾರು ತಗುಲಿರುವ ವೆಚ್ಚ		
				2008–2009	2009–2010	2011
1.	KN-19-25A	T07-Giriyapalli	57.95	57.95	0.00	0.00
2.	KN-19-25B	BD road, Saddaiayarapalli	5.77	5.77	0.00	0.00
3.	KN-19-60	Nallapparaddipalli T-06	173.68	114.04	59.64	0.00
4.	KN-19-61	Boovipalli T-05	42.31	32.04	10.27	0.00

5.	KN-19-72	Arigevarigutta T-01	235.55	0.75	234.69	0.12
6.	KN-19-73	Doddipalli T-03	57.03	0.08	45.34	11.61
7.	KN-19-109	Gummaulapalli T-03	86.54	0.00	17.04	69.50
8.	KN-19-110	Krishnapura T-08	187.21	0.00	121.92	65.29
9.	KN-19-111	Kothakote T-06	180.12	0.00	128.38	51.74
10.	KN-19-112	Narayanapalli T-01	121.82	0.00	81.74	40.08
11.	KN-19-120	Gimda,varipalli T-03	1999	ಕಾಮಗಾರಿಯನ್ನು ಮಾರ್ಚ್ 2011ರಲ್ಲಿ ಕೈಗೆತಿತಕೊಂಡಿರುವುದರಿಂದ 2011-12ನೇ ಸಾಲಿನಲ್ಲಿ ವೆಚ್ಚವನ್ನು ಭರಿಸಲಾಗಿದೆ.		
			ಒಟ್ಟು	324.67	758.56	238.34

ಮುಜರಾಯಿ ಇಲಾಖೆಯಲ್ಲಿ ತಾತ್ಕಾಲಿಕ ನೌಕರರ ವಿವರ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 117 (118)

ಸದಸ್ಯರ ಹೆಸರು : ಶ್ರೀ ಶಂಕರಲಿಂಗೇಗೌಡ ಹೆಚ್.ಎಸ್. (ಚಾಮರಾಜ)

ಉತ್ತರಿಸುವ ಸಚಿವರು : ಡಾ. ವಿ.ಎಸ್.ಆಚಾರ್ಯ (ಉನ್ನತ ಶಿಕ್ಷಣ, ಯೋಜನೆ, ಸಾಂಖ್ಯಿಕ, ಮುಜರಾಯಿ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ)

ಪ್ರಶ್ನೆಗಳು:

ಅ) ರಾಜ್ಯ ಸರ್ಕಾರದ ಮುಜರಾಯಿ ಇಲಾಖೆಯಲ್ಲಿ ತಾತ್ಕಾಲಿಕವಾಗಿ, ದಿನಗೂಲಿ ಆಧಾರದ ಮೇಲೆ ಅಥವಾ ಖಾಯಂ ಅಲ್ಲದ ನೌಕರರ ಹಾಗೂ ಅರ್ಚಕರ ಸಂಖ್ಯೆ ಎಷ್ಟು? (ವಿವರ ಒದಗಿಸುವುದು);

ಆ) ಪ್ರಸ್ತುತ ನೀಡುತ್ತಿರುವ ಸಂಬಳ, ಸಂಭಾವನೆ ಎಷ್ಟು? (ವಿವರ ನೀಡುವುದು);

ಇ) ಎಷ್ಟು ವರ್ಷಗಳಿಂದ ಕರ್ತವ್ಯ ನಿರ್ವಹಿಸುತ್ತಿದ್ದಾರೆ? ಇವರುಗಳನ್ನು ಖಾಯಂ ಮಾಡಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು?